ಶ್ರೀ ಜಿ. ನಾರಾಯಣಗೌಡರು (ಮುಳಬಾಗಿಲು — ಶ್ರೀನಿವಾಸಪುರ).—ಎಂ. ವಿ. ಕೃಷ್ಣಪ್ಪ, ಮುಳಬಾಗಿಲು. ಇವರು ಎಲ್ಲಾ ಇಸ್ಟಾಲ್‌ಮೆಂಟ್‌ಗಳನ್ನೂ ಕೊಟ್ಟಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಜಿ. ನಾರಾಯಣಗೌಡರು.—ಅವರು ಎಲ್ಲಾ ಹಣವನ್ನೂ ಲಂಪ್‌ಸಂ ಆಗಿ ಕೊಡುತ್ತೀನೆ ಎಂದು ಬರೆದುಕೊಟ್ಟಿದ್ದಾರಲ್ಲವೇ?

ಅಧ್ಯಕ್ಷರು.—ಅದನ್ನು ಉತ್ತರದಲ್ಲೇ ತಿಳಿಸಿದೆ.

ಜನಾಬ್ ಜೆ ಮಹಮದ್ ಇಮಾಂರವರು (ಜಗಳೂರು)—ಡಿ. ದೇವರಾಜ ಅರಸಿನವರು, ಜವಿಾನ್ದಾರರು, ಕಲ್ಲಹಳ್ಳಿ, ಎಂದು ತಿಳಿಸಿದ್ದೀರಿ. ಅವರು ಯಾರು ಸ್ವಾಮಿ?

Sri Kadidal MANJAPPA.—He is a solvent person.

Mr. SPEAKER.—His full address is given.

ಜನಾಬ್ ಜೆ. ಮಹಮದ್ ಇಮಾಂರವರು.—ಅವರು ಇದುವರೆಗೂ ಇಸ್ಟಾಲ್‌ಮೆಂಟ್ ಕೊಟ್ಟಿದ್ದಾರೆಯೇ?

Sri Kadidal MANJAPPA.—It is stated here, that he has not paid any instalment so far.

Janab J. MOHAMED IMAM.—What action has been taken?

Sri Kadidal MANJAPPA.—That is mentioned. "The Deputy Commissioner, Mysore, has been addressed to recover the amount in full."

Janab J. MOHAMED IMAM.—What is the grace time allowed for recovering the instalments?

Sri Kadidal MANJAPPA.—No grace time. It depends upon the circumstances of each case.

Janab J. MOHAMED IMAM.—How many cattle and buffaloes have been owned by these two gentlemen—Sri D. Devaraja Urs and Sri M. V. Krishnappa in connection with the starting of dairy farm?

Sri Kadidal MANJAPPA.—I want notice.

Janab J. MOHAMED IMAM.—Has anything been mentioned in the report? I would request the Hon'ble Minister to let me know, according to the report, how many milch cows and buffaloes have been owned by these two gentlemen and how much of milk was sold to the public?

Sri Kadidal MANJAPPA.—Information is not available here.

Janab J. MOHAMED IMAM.—Have the Government called for any information regarding this?

Sri Kadidal MANJAPPA.—Government are interested in recovering the amount due by these persons.

Janab J. MOHAMED IMAM.—Was it not a condition precedent prior to the granting of the loan that they should start dairy farm?

Sri Kadidal MANJAPPA.—Certainly.

Janab J. MOHAMED IMAM.—Have the Government satisfied themselves that all these gentlemen started dairy farms and have they called for any information regarding the number of cattle owned and how far it proved successful in catering to the public need?

Sri Kadidal MANJAPPA.—We will get the information.

Repair of feeder channel of Rangadhama Tank.

Q.—374. Sri A. MUNIYAPPA (Sidlaghatta—Chikballapur--Scheduled Castes).—

Will the Government be pleased to state :—

(*a*) the number of years that have elapsed since the feeder channel of Rangadhama Tank in Chikballapur Taluk breached ;

(*b*) whether it has come to their notice that the water from this channel flows through Manchenahalli of Goribidnur Taluk into North Pennar River and thus reach the ocean therefrom ;

(*c*) whether it has come to their notice that by repairing this channel, adequate quantity of water would flow into the tanks of Chikballapur and Sidlaghatta Taluks ;

(*d*) whether as per the assurance of the Home Minister who visited the place about a year back that he would

(SRI A. MUNIYAPPA)

inform the Government, any records have been built up ;

(*e*) whether a scheme for repairing the feeder channel is under their consideration ;

(*f*) if not whether action will be taken to put the scheme into effect ?

A.—**Sri Kadidal MANJAPPA** (Minister for Revenue and Public Works).—

(*a*) About 65 years.

(*b*) The feeder channel has never functioned.

(*c*) Adequate quantity of water is not available. The cost of improving the feeder channel is prohibitive, the benefit derived is meagre. The supply that could be obtained is only 40 units which is quite insufficient for the Rangadhama Tank itself.

(*d*) A project for Rs. 3,00,000 was got up. It was ordered to be dropped for reasons stated at (*c*) above.

(*e*) *and* (*f*) The question of improving the existing Right Bank Channel is under consideration.

ಶ್ರೀ ಎ. ಮುನಿಯಪ್ಪನವರು.—65 ವರ್ಷ ಗಳಾಯಿತು ಎಂದು ಹೇಳಿದ್ದೀರಿ. ಅಲ್ಲಿಂದೀಚೆಗೆ ಆ ಕಟ್ಟು ಕಾಲುವೆಯನ್ನು ರಿಪೇರಿ ಮಾಡುವು ದಕ್ಕೆ ಸರ್ಕಾರದವರು ಪ್ರಯತ್ನಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ರಿಪೇರಿ ಮಾಡುವುದು ಸೂಕ್ತವಲ್ಲ ಎಂದು ಸರ್ಕಾರದ ತೀರ್ಮಾನವಾಗಿದೆ.

ಶ್ರೀ ಎ. ಮುನಿಯಪ್ಪನವರು.—20 ವರ್ಷ ಗಳ ಹಿಂದೆ ಈ ಕಟ್ಟು ಕಾಲುವೆಯನ್ನು ದುರಸ್ತು ಮಾಡುವುದಕ್ಕೆ ಯಥೇಚ್ಛವಾಗಿ ದುಡ್ಡು ಖರ್ಚು ಮಾಡಿ ಸರ್ಕಾರಿ ಅಧಿಕಾರಿಗಳ ಮೇಲ್ವಿಚಾರಣೆ ಇಲ್ಲದೆ ತಿರುಗಿ ಅದು ಒಡೆದುಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—1897ನೇ ಇಸವಿಯಲ್ಲಿ ಈ ಫೀಡರ್ ನಾಲೆಯನ್ನು ದುರಸ್ತುಪಡಿಸುವುದಕ್ಕೆ ಬಹಳ ದುಬಾರಿ ಖರ್ಚಾಗುತ್ತದೆಂದು ರಿಪೇರಿ ಮಾಡುವುದು ಸೂಕ್ತವಲ್ಲ ಎಂದು ತೀರ್ಮಾನ ಮಾಡಿದರು. 1932ರಲ್ಲಿ ಒಂದು ಭಾಗ ದುರಸ್ತು ಮಾಡಿ ಬಿಟ್ಟರು. ಆಮೇಲೆ 1949ನೇ ಇಸವಿಯಲ್ಲಿ ಅಂದಾಜು ತಯಾರುಮಾಡಿ ಮೂರುಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಖರ್ಚಾಗುತ್ತ ದೆಂದು ಹೇಳಿ ಮನದಟ್ಟಾದ ಮೇಲೆ ಸೂಕ್ತವಲ್ಲ ವೆಂದು ಹೇಳಿ ಆ ಯೋಚನೆಯನ್ನು ಬಿಟ್ಟು ಬಿಟ್ಟರು.

ಶ್ರೀ ಎ. ಮುನಿಯಪ್ಪನವರು.—(ಬಿ)ಗೆ ನೀರು ಸಾಗಿಲ್ಲ ಎಂದು ಹೇಳಿ ಉತ್ತರ ಕೊಟ್ಟಿದ್ದೀರಿ. ಚಿಕ್ಕಬಳ್ಳಾಪುರದ ಚಿಕ್ಕಬಾಜೇ ಗೌಡರು ಕಟ್ಟು ಕಾಲುವೆಯನ್ನು ಕಟ್ಟಿ ಆ ತಾಲ್ಲೂಕಿನ ಎಲ್ಲಾ ಕೆರೆಗಳಿಗೂ ನೀರು ಸರಬರಾಯಿ ಮಾಡುತ್ತಾ ಇದ್ದುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ವಿ. ಮುನಿಯಪ್ಪನವರು.—ಹಿಂದೆ ಈ ಕಟ್ಟು ಕಾಲುವೆ ರಂಗಧಾಮನ ಕೆರೆ ಮತ್ತು ಇತರ ಕೆರೆಗಳಿಗೆ ನೀರು ಒದಗಿಸುತ್ತಾ ಇದ್ದುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ರಂಗ ಧಾಮನ ಕೆರೆಗೆ ಫೀಡರ್ ನಾಲಾ ಅವಶ್ಯಕತೆ ಇಲ್ಲ ಎಂದು ವರದಿ ಬಂದಿದೆ.

ಶ್ರೀ ಎ. ಮುನಿಯಪ್ಪನವರು.—(ಇ) ಮತ್ತು (ಎಫ್) ಪ್ರಶ್ನೆಗಳಿಗೆ ಉತ್ತರವಾಗಿ ಹಾಲಿ ಇರತಕ್ಕ ಬಲದಡದ ನಾಲೆಯನ್ನು ಉತ್ತಮ ಗೊಳಿಸುವ ವಿಷಯವು ಸರ್ಕಾರದ ಪರ್ಯಾಲೋ ಚನೆಯಲ್ಲಿದೆ ಎಂದು ಹೇಳಿದ್ದೀರಿ. ಕ್ಷಾಮ ಪರಿಹಾರ ಕಾಮಗಾರಿಗಳಲ್ಲಿ ಆ ನಾಲೆಯನ್ನು ಸೇರಿಸಿಕೊಂಡು ಆದಷ್ಟು ಜಾಗ್ರತೆ ಕೆಲಸ ಮಾಡುವುದಕ್ಕೆ ಸರ್ಕಾರದ ಅಭಿಪ್ರಾಯವೇನು?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ದೀರ್ಘವಾಗಿ ಯೋಚನೆಮಾಡತಕ್ಕ ವಿಚಾರ. ಬಹಳ ಖರ್ಚಾಗುತ್ತದೆ. ಖರ್ಚಿಗನುಗುಣವಾಗಿ ಪ್ರತಿಫಲ ದೊರೆಯುವುದಿಲ್ಲ ಎಂದು ಸರ್ಕಾರಕ್ಕೆ ವರದಿ ಬಂದಿದೆ. ಯೋಚನೆಮಾಡುತ್ತೇನೆ.

Safeguarding Harijan representation in the Public Service Commission.

Q.—385. **Sri C. T. HANUMANTHAIYA** (Pavagada—Scheduled Castes).—